**ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ</u>**

ಈ ದಾವೆಯನ್ನು ಸಲ್ಲಿಸಿದವರು ಸುಶೀಲದೇವಿ ರವರು. ದಿನಾಂಕ 18.12.2004 ರ ಭೋಗ್ಯ ಪತ್ರ ವಾದಿ ಹಾಗೂ 1 ನೇ ಪ್ರತಿವಾದಿಯ ಮಧ್ಯೆ ಆಗಿತ್ತು ಎಂದರೆ ಸರಿ. ದಿನಾಂಕ 26.01.2020 ರಂದು ವಾದಿಯು ಮೃತ ಪಟ್ಟಿರುತ್ತಾರೆ. ಅವರ ಮರಣದ ನಂತರ ಅವರ ಮಗ ರಾಜ ಅಚಾರ್ಯ ರವರು ಈ ದಾವೆಯನ್ನು ನೋಡಿಕೊಳ್ಳುತ್ತಿದ್ದು ಅವರ ಪರವಾಗಿ ನಾನು ಬರುತ್ತಿದ್ದೇನೆ. ನಾನು ವಾದಿಯ ಕುಟುಂಬದ ಸದಸ್ಯನಲ್ಲ. ಆದರೆ ನನಗೆ ಅವರ ಪರಿಚಯ ಇದೆ. ನಾನು ಈಗ ರಾಜ ಆಚಾರ್ಯ ರವರ ಅಧಿಕಾರ ಪತ್ರ ಹೊಂದಿದವನು ಮಾತ್ರ ಎಂದರೆ ಸರಿ. ವಾದಿ ಸಂ.1(ಬಿ) ಯಿಂದ 1(ಡಿ) ರವರ ಪರವಾಗಿ ನನಗೆ ಯಾವುದೇ ಅಧಿಕಾರ ಪತ್ರ ಇಲ್ಲ. ವಾದಿ ಸಂ.1(ಬಿ) ರವರು ರಾಜ ಆಚಾರ್ಯ ರವರ ಸಹೋದರನ ಹೆಂಡತಿ ಎಂದರೆ ಸರಿ.

ಪ್ರಶ್ನೆಃ- ಪ್ರತಿವಾದಿ ಸಂ.1(ಬಿ) ಯಿಂದ 1(ಡಿ) ರವರು ಮೂಲ ದಾವೆ ಸಂ.3741/2020 ರಲ್ಲಿ ವಾದಿಯು ರಾಜ ಅಚಾರ್ಯ ರವರಿಗೆ ಮಾಡಿಕೊಟ್ಟಿದ್ದ ದಾನ ಪತ್ರವನ್ನು ಪ್ರಶ್ನಿಸಿ ದಾವೆ ಸಲ್ಲಿಸಿರುತ್ತಾರೆ ?

ಸದರಿ ಪ್ರಶ್ನೆಗೆ ವಾದಿಗಳ ಪರ ವಕೀಲರು ತಕರಾರು ಮಾಡಿದ್ದು ಈ ದಾವೆಯು ಕೇವಲ ಪ್ರತಿವಾದಿಗಳನ್ನೇ ದಾವಾ ಸ್ವತ್ತಿನಿಂದ ಖಾಲಿ ಮಾಡಿಸಿ ಸ್ವಾಧೀನ ಪಡೆದುಕೊಳ್ಳಲು

ಹಾಗೂ ಬಾಕಿ ಬಾಡಿಗೆ ಹಣ ವಸೂಲಿಗಾಗಿ ಸಲ್ಲಿಸಿದ್ದು ಮೂಲ ದಾವೆ ಸಂ.3741/2020 ರ ದಾವೆಯು ಈ ದಾವೆ ಬಾಕಿ ಇರುವಾಗ ಸಲ್ಲಿಸಿದ್ದು ಆ ದಾವೆಗೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಹಾಗೂ 1 ನೇ ಪ್ರತಿವಾದಿಯು ವಾದಿಯ ಮರಣದ ನಂತರ ಅವರ ವಾರಸುದಾರರ ಮಾಲೀಕತ್ವವನ್ನು ಪ್ರಶ್ನಿಸುವ ಯಾವುದೇ ಅಧಿಕಾರವನ್ನು ಹೊಂದಿರುವುದಿಲ್ಲ ಎಂಬುವುದು ತಕರಾರು ಆಗಿರುತ್ತದೆ.

ಸದರಿ ತಕರಾರಿಗೆ 1 ನೇ ಪ್ರತಿವಾದಿ ಪರ ವಕೀಲರು ನಿಪಿ-1 ರಲ್ಲಿ ಮೂಲ ದಾವೆ ಸಂ.3741/2020 ರ ಬಗ್ಗೆ ಉಲ್ಲೇಖಿಸಿದ್ದು ಆ ಕಾರಣಕ್ಕೆ ಸದರಿ ಪ್ರಶ್ನೆಯು ಪ್ರಸ್ತುತವೆಂದು ಹೇಳಿರುತ್ತಾರೆ.

ಈ ದಾವೆಯಲ್ಲಿನ ವಸ್ತು ವಿಷಯ, ಉಭಯ ಪಕ್ಷಗಾರರ ಮಧ್ಯೆ ಇರುವ ವ್ಯಾಜ್ಯವನ್ನು ಪರಿಶೀಲಿಸಿದಾಗ ಮೂಲ ದಾವೆ ಸಂ.3741/2020 ರ ದಾವೆಯು ಈ ದಾವೆ ಚಾಲ್ತಿಯಲ್ಲಿರುವಾಗ ಸಲ್ಲಿಸಿರುವ ದಾವೆ ಆಗಿದ್ದು ಅದರಲ್ಲಿ ವಾದಿ ಮತ್ತು ವಾದಿಯ ವಾರಸುದಾರರ ಮಧ್ಯೆ ಇರುವ ವ್ಯಾಜ್ಯವು ಆಗಿರುತ್ತದೆ. ನಿಪಿ-1 ರಲ್ಲಿ ಈ ದಾವೆಯ ವಾದಿ ಸಂ.1(ಎ) ರವರು ಪಿಡಬ್ಲ್ಯೂ-1 ರವರಿಗೆ ಸದರಿ ವ್ಯಾಜ್ಯವನ್ನು ಪ್ರತಿನಿಧಿಸಲು ಅಧಿಕಾರ ಪತ್ರವನ್ನು ನೀಡಿರುವ ಬಗ್ಗೆ ಉಲ್ಲೇಖಿಸಿದ್ದು ಸದರಿ ವ್ಯಾಜ್ಯದಲ್ಲಿನ ಯಾವುದೇ ವಿವಾದವಾಗಲೀ ಅಥವಾ ವಸ್ತು ವಿಷಯಗಳಾಗಲೀ ಈ ದಾವೆಗೆ ಯಾವುದೇ ರೀತಿಯಲ್ಲಿ ಸಂಬಂಧ ಪಡುವುದಿಲ್ಲ. ಆದ್ದರಿಂದ ಮೂಲ ದಾವೆ ಸಂ.3741/2020 ರ ದಾವೆಗೆ ಸಂಬಂಧಪಟ್ಟ ಪ್ರಶ್ನೆ ಈ ದಾವೆಯಲ್ಲಿ ಉದ್ಭವವಾಗದ ಕಾರಣ ಮೇಲಿನ ಪ್ರಶ್ನೆಗೆ ಸಾಕ್ಷಿಯು ಉತ್ತರಿಸುವಲ್ಲಿ ವಿನಾಯಿತಿಯನ್ನು

ನೀಡಲಾಯಿತು.

ದಿನಾಂಕ 18.12.2004 ರ ಭೋಗ್ಯ ಪತ್ರದ ನಿಬಂಧನೆಗಳ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಸದರಿ ಭೋಗ್ಯ ಪತ್ರ ಆಗುವ ಸಮಯದಲ್ಲಿ ನಾನು ಹಾಜರು ಇರಲಿಲ್ಲ ಎಂದರೆ ಸರಿ. ವಾದಿ ಸಂ.1(ಎ) ರವರ ಹೇಳಿಕೆಯ ಮೇರೆಗೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ಹೌದು ನನಗೆ ವಾದಿ ಇರುವಾಗಲೂ ಸಹಾ ಗೊತ್ತು. ವಾದಿಯು ಅವರ ಜೀವಿತ ಕಾಲದಲ್ಲಿ ನನಗೆ ಅಧಿಕಾರ ಪತ್ರವನ್ನು ನೀಡಿದ್ದರು. ಈ ದಾವೆಯಲ್ಲಿ ನಾನು ಆ ದಾಖಲೆಯನ್ನು ಹಾಜರುಪಡಿಸಿದ್ದೇನೆಯೇ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ.

ವಾದಿಯ ಜೀವಿತ ಕಾಲದಲ್ಲಿ 1 ನೇ ಪ್ರತಿವಾದಿಯು ವಾದಿಗೆ ಬಾಡಿಗೆ ಹಣವನ್ನು ಚೆಕ್ ಮೂಲಕ ಪಾವತಿಸುತ್ತಿದ್ದರು. ದಾವಾ ಸ್ವತ್ತು ಎಂ.ಜಿ.ರಸ್ತೆಯಲ್ಲಿ ಇದೆ. ದಾವಾ ಸ್ವತ್ತು ಎಂ.ಜಿ.ರಸ್ತೆಯಲ್ಲಿ ಇಲ್ಲ ಎಂದರೆ ಸರಿಯಲ್ಲ. 2004 ಕ್ಕೂ ಹಿಂದೆ ದಾವಾ ಸ್ವತ್ತಿನಲ್ಲಿ ಬೇರೆ ಬಾಡಿಗೆದಾರರು ಇದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ಆ ಬಾಡಿಗೆದಾರರಿಗೆ Good Will ನೀಡಿ ಅವರನ್ನು ಖಾಲಿ ಮಾಡಿಸಿ ಸ್ವತ್ತಿನಲ್ಲಿದ್ದ ಕಟ್ಟಡವನ್ನು ಅವರ ಖರ್ಚಿನಿಂದ ಕೆಡವಿ ಅಭಿವೃದ್ಧಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2008 ರಿಂದ ನಾನು ವಾದಿಯ ಸಂಪರ್ಕದಲ್ಲಿ ಇರುತ್ತೇನೆ. ಅದಕ್ಕೂ ಹಿಂದೆ ಆಗಿದ್ದ ಯಾವುದೇ ವಿಚಾರಗಳು ನನ್ನ ಗಮನಕ್ಕೆ ಇರುವುದಿಲ್ಲ ಎಂದರೆ ಸರಿ. ನಿಪಿ-2 ರ ದಾಖಲೆಯಲ್ಲಿ ಸೇವಾ ತೆರಿಗೆಯ ಬಗ್ಗೆ ಎಲ್ಲಿಯೂ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ. ಅಕ್ಟೋಬರ್ 2012 ರಿಂದ ದಾವೆ ಸಲ್ಲಿಸುವವರೆಗೆ 1 ನೇ ಪ್ರತಿವಾದಿಯು ದಾವಾ ಸ್ವತ್ತಿನ

ಬಾಡಿಗೆಯನ್ನು ಉಳಿಸಿಕೊಂಡಿದ್ದರು ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ.

**ಮುಂದುವರೆದ ಪಾಟೀ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
(ಪ್ರಭಾರ) 5 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು.